ಹಾಗೂ ನಾವು ಸಹಾ ಸಬ್ ಸ್ಟ್ಯಾಂಡರ್ಡ್ ಹಾಲನ್ನು ಸರಬರಾಜು ಮಾಡುತಾ ಇಲ್ಲ. We have to maintain 3.5 fat content, which is a national standard. We will be held responsible for it. ನಮ್ಮ ಡೈರಿಯಲ್ಲಿ ಉತ್ಪಾದನೆಯಾಗುವ ತುಪ್ಪಕ್ಕೆ ರಾಷ ದಲ್ಲಿ ಬೇಡಿಕೆ ಅತ್ಯಧಿಕವಾಗಿದೆ. ಆದರೆ ಆ ಬೇಡಿಕೆಯನ್ನು ಪೂರೈಕೆ ಮಾಡುವುದು ಬಹಳ ಕಷ್ಟವಾಗಿದೆ. ಹಾಲು ಉತ್ಪಾದನೆ ಕಡಿಮೆಗೊಂಡಾಗ ಅದರ ಬೈ ಪ್ರಾಡಕ್ಟ್ಸ್‌ಗಳ ಉತ್ಪಾದನೆಯೂ ಕಡಿಮೆಯಾಗಂಗುತ್ತದೆ. ರೈತಮುಖಂಡರು ಹಾಲಿನ ದರವನ್ನು ಏರಿಸುವ ಬಗ್ಗೆ ನಮ್ಮ ಜೊತೆ ಅನೇಕ ಸಾರಿ ಚರ್ಚೆ ಮಾಡಿದ್ದಾರೆ I am not personally attacking you. ರೈತರ ಒಂದು ಬೇಡಿಕೆಯನ್ನು ಪೂರೈಕೆ ಮಾಡಿದ್ದರ ಬಗ್ಗೆ ಮಾನ್ಯ ಸದಸ್ಯರು ಸ್ವಾಗತ ಮಾಡುವ ಬದಲು ಸಭಾತ್ಯಾಗ ಮಾಡಿದ್ದಾರೆ.

SRI S.R. BOMMAI.—Walk out is not for enchancement of procurment price, walk-out is only against the increase of selling price.

ಶ್ರೀ ವೈ. ರಾಮಕೃಷ್ಣ.—ಅಧ್ಯಕ್ಷರೆ, ಸಾಗಣೆ ವಿಚಾರದಲ್ಲಿ ಹೇಳುವುದಾದರೆ ಹಿಂದೆ ಒಂದು ಲಾರಿಯ ಬೆಲೆ ೧ ಲಕ್ಷ ರೂಪಾಯಿ ಇದ್ದುದು ಈಗ ೨ ಲಕ್ಷ ರೂಪಾಯಿಯಾಗಿದೆ. ಕಳೆದ ಬಾರಿ ಈ ಸದನದಲ್ಲಿ ಹಾಲಿನ ಬೆಲೆಯನ್ನು ಹೆಚ್ಚು ಮಾಡಿದ ಮೇಲೆ ಈ ಒಂದು ವರ್ಷದಲ್ಲಿ [ಪೆಟ್ರೋಲ್ ಹಾಗೂ ಡೀಸಲ್ ಬೆಲೆಗಳಲ್ಲಿ ಮೂರು ಬಾರಿ ಹೆಚ್ಚಳವಾಗಿದೆ. ನಿರ್ವಹಣೆ ವೆಚ್ಚ ಜಾಸ್ತಿಯಾಗಿದೆ. ವೇರ್ ಅಂಡ್ ಟೀರ್ ಜಾಸ್ತಿಯಾಗಿದೆ. ಈ ಹಿಂದೆ ೧ ರೂಪಾಯಿ ಖರ್ಚು ತಗುಲುತ್ತಿದ್ದಂತಹ ಕೆಲಸಕ್ಕೆ ಈಗ ೩ ರೂಪಾಯಿ ಕೊಡಬೇಕಾಗಿದೆ. ಈ ವೆಚ್ಚಗಳನ್ನೆಲ್ಲಾ ಭರಿಸುವವರು ಯಾರು? ಹಾಗೂ ಪಂತ್ರೊಂದಂ ವಿಷಯವೇನೆಂದರೆ, ಇವತ್ತು ಹಾಲಿನ ಸರಬರಾಜಿನ ಬಗ್ಗೆ ಕಂಪಲ್ಸರಿ ಲೆಜಿಸ್ಲೇಷನ್ ಮಾಡಿಲ್ಲ. ಹಾಗೂ ಅದನ್ನು ಮಾಡತಕ್ಕ ಅವಶ್ಯಕತೆ ಕೂಡಾ ಇಲ್ಲ. ಏಕೆಂದರೆ, ಮಳೆಗಾಲದಲ್ಲಿ ಹಾಲು ಹೆಚ್ಚು ಸಿಗುತ್ತದೆ ಹಾಗೂ ಬೇಸಿಗೆಯಲ್ಲಿ ಇದರ ಪ್ರಮಾಣ ಕಡಿಮೆಯಾಗುತ್ತದೆ. ಮಳೆಗಾಲದಲ್ಲಿ ಏನು ಹಾಲು ಹೆಚ್ಚು ಬರುತ್ತದೆ ಅದನ್ನು ಪೌಡರ್ ಮಾಡಲು ೫ ಪೌಡರ್ ಪ್ಲಾಂಟ್‌ಗಳನ್ನು ಹಾಕಲಾಗುತ್ತಿದೆ. ದಿನಕ್ಕೆ ಸರಾಸರಿ ೧೦ ಟನ್ ಪ್ರಮಾಣದ ಪೌಡರ್ ಪ್ಲಾಂಟ್‌ನ್ನು ಗೆಜ್ಜಲಗೆರೆಯಲ್ಲಿ ತರುತ್ತಿದ್ದೇವೆ. ಹಾಗೂ ಸುಮಾರು ೨೦ ಟನ್ ಪ್ರಮಾಣದ ಪೌಡರ್ ಪ್ಲಾಂಟನ್ನು ಧಾರವಾಡದಲ್ಲಿ ತರುತ್ತಿದ್ದೇವೆ. ಈ ದಿನ ಮೇವು ಹಾಗೂ ತೌಡಿನ ಬೆಲೆಯೇರಿಕೆಯಿಂದ ರೈತರು ಕಂಗೆಟ್ಟಿದ್ದಾರೆ. ಹಾಗೂ ಅವರಿಗೆ ಕೊಡತಕ್ಕ ಹಣ ಕಡಿಮೆ ಇದೆ. ಆದರೆ ಈ ಒಂದು ಭಾರವನ್ನು ಬಳಕೆದಾರರ ಮೇಲೆ ಹಾಕುವುದಕ್ಕೆ ನನಗೆ ಇಷ್ಟವಿಲ್ಲದಿದ್ದರೂ ಮನನೊಂದು, ಅನಿವಾರ್ಯವಾಗಿ ಈ ಬೆಲೆಯನ್ನು ನಿಗಧಿಮಾಡಲಾಗಿದೆಯೆಂದು ನಾನು ಆಗಲೇ ಹೇಳಿದ್ದೇನೆ. ಮಾನ್ಯ ಸದಸ್ಯರು ನನ್ನ ಮಾತನ್ನು ಒಪ್ಪುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ.

MR. DEPUTY SPEAKER.—Next calling attention notice by the hon. Member Sri Bheemanna S. Khandre.

(ii) *re.—Acute shortage of drinking water in Bhalki.*

SRI BHEEMANNA S. KHANDRE.—Sir, I call the attention of the Hon. Minister for Housing and Urban Development to the acute scarcity of drinking water in Bhalki, Bidar district.

SRI DHARAM SINGH NARAYAN SINGH (Minister for Housing and Urban Develepment).—Sir, I wish to make the following statement.

At present water supply to Bhalki Town is from Bore Wells and open wells. It is true that during the current year, due to failure of rains, scarcity for drinking water is experienced in the town of Bhalki also. With a view to tide over the difficult situation action has been taken by the Karnataka Urban Water Supply and Drainage Board, in consultation with the Deputy Commissioner Bidar, to sink

6 bore wells. 4 bore wells have failed. The other two bore wells yield about 2,300 gallons per hour. In addition, one open well is also desilted and is being fitted with a 10 HP pump-set to pump water to the overhead tank. With this arrangement, it has been possible to provide 10 gallons of water per head per day. A sum of Rs. 1.78 lakhs has been spent under the Scarcity Relief Programme.

However, keeping in view the recurring difficult situation, the Water Supply Board has prepared comperhensive estimate at a cost of Rs. 45. 00 lakhs with Manjra River as the source. This would meet the demands of a projected population of 30,000 upto 2001 A.D. The local Municipal Council has also accepted this estimate. The proposal is presently under the the consideration of Government for sanction.

† ಶ್ರೀ ಎಸ್ ಭೀಮಣ್ಣ ಖಂಡ್ರೆ.—ಮಾನ್ಯ ಅಧ್ಯಕ್ಷರೇ ಇದು ಸುಮಾರು ೧೦ ವರ್ಷಗಳಿಂದ ಬೀದರ್ ಜಿಲ್ಲಾ ಬರಗಾಲ ಪರಿಸ್ಥಿತಿಗೆ ಒಳಗಾಗಿದೆ. ಸುಮಾರು ೧೯೭೨ನೇ ಇಸವಿಯಿಂದಲೂ ಇಲ್ಲಿಯವರೆಗೆ ಬರಗಾಲ ಇದೆ ಕುಡಿಯುವ ನೀರಿನ ಪ್ರಶ್ನೆ ಬಹಳ ಕಾಲದಿಂದ ಇದೆ. ನಮ್ಮ ಬೇಗಾನೆ ರಾಮಯ್ಯನವರು ಬಂದ ನಂತರ ನಾಲ್ಕು ಕೊಳವೆ ಬಾವಿಗಳನ್ನು ಮಾಡಿದ್ದರೆ ಅವರನ್ನು ಸ್ವಾಗತಿಸ ಬಹುದಾಗಿತ್ತು. ಆದರಲ್ಲೂ ಬಾಲ್ಕಿ ಟೌನ್‌ನೊಳಗೆ ಕುಡಿಯುವ ನೀರಿನ ಸಮಸ್ಯೆ ಬಹಳ ಕೆಟ್ಟದ್ದು ಇದೆ. ನಾನು ಎಷ್ಟೋ ಸಾರಿ ಇದರ ಬಗ್ಗೆ ಮಾನ್ಯ ಮಂತ್ರಿಗಳವರಲ್ಲಿ ಮನವಿ ಮಾಡಿಕೊಂಡಿದ್ದೇನೆ, ಹಿಂದಿನ ಮಂತ್ರಿಮಂಡಲದಲ್ಲೂ ಕೂಡ ಅರಿಕೆ ಮಾಡಿಕೊಂಡಿದ್ದೇನೆ ಆದರೆ, ಎಲ್ಲರೂ ಕೊಡುತ್ತೇವೆಂದು ಹೇಳುತ್ತಾರೆ ಇದುವರೆಗೂ ಆಗಿಲ್ಲ. ಉದಾಹರಣೆಗೆ ಹೇಳುವುದಾದರೆ ೨ ಲಕ್ಷ ರೂಪಾಯಿಗಳನ್ನು ಕೊಡುತ್ತೆನೆಂದು ಡಿಕ್ಲೇರ್ ಮಾಡಿದರು. ಡಿವಿಜನಲ್ ಕಮಿಷನರ್ ಮತ್ತು ಜಿಲ್ಲಾ ಅಭಿವೃದ್ಧಿ ಸಮಿತಿಯ ಪರ್ಮಿಷನ್ ತೆಗೆದುಕೊಂಡು ಬಾವಿ ಹೊಡೆಯಲಾಯಿತು, ಆದರೂ ಆ ಬಾವಿ ಯಶಸ್ವಿ ಆಗಲಿಲ್ಲ. ಇವತ್ತು ಬಾವಿ ಹೊಡೆಯಲಿಕ್ಕೆ ೬೦ ಸಾವಿರ ರೂಪಾಯಿಗಳು ಖರ್ಚು ಆಗಿದೆ. ಆಂದಾಜಿನ ಲೆಕ್ಕದ ಪ್ರಕಾರ ೨ ಲಕ್ಷದ ೫೦ ಸಾವಿರ ಇದೆ ಈ ಹಣದ ಸಲುವಾಗಿ ನಾಲ್ಕು ತಿಂಗಳಿಂದ ಪ್ರತಿಯೊಂದು ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಕೌನ್ಸಿಲ್ ಮೀಟಿಂಗ್‌ನಲ್ಲೂ ರೆಸ್ಯೂಲೂಷನ್ ಪಾಸ್ ಮಾಡಿ ಹಣ ಬರಬೇಕೆಂದು ಸರ್ಕಾರಕ್ಕೆ ಬರೆಯುತ್ತಿದ್ದೇವೆ. ಹಣವನ್ನು ಮಾತ್ರ ಇದುವರೆಗೆ ಕಳುಹಿಸಿಲ್ಲ. ಶ್ರೀಮಾನ್ ಖಾರ್ಗೆ ಸಾಹೇಬರನ್ನು ಕೇಳಿದರೆ ನನಗೆ ಸಂಬಂಧವಿಲ್ಲವೆಂದು ಹೇಳುತ್ತಾರೆ. ಶ್ರೀಮಾನ್ ಧರ್ಮಸಿಂಗ್‌ರವರನ್ನು ಕೇಳಿದರೆ ಇನ್ನು ವಿಚಾರ ಮಾಡುತ್ತಿದ್ದೇವೆಂದು ಹೇಳುತ್ತಾರೆ. ಳಳ ಲಕ್ಷ ರೂಪಾಯಿಗಳ ದೊಡ್ಡ ಸ್ಕೀಮ್ ತೆಗೆದುಕೊಳ್ಳುವವರೆಗೂ ಜನ ಅಲ್ಲಿ ಹೇಗೆ ಇರಬೇಕು? ಅಲ್ಲಿನ ಜನಗಳು ನೀರು ಇಲ್ಲದೆ ಸಾಯುತ್ತಿದ್ದಾರೆ ಎಂಬ ಕಲ್ಪನೆ ಇರಬೇಕು. ಅದಕ್ಕೆ ನಾನು ಹೇಳುತ್ತಿದ್ದೇನೆ. I am very much thankful to our Hon. Finance Minister who has assured to release Rs. ೪೫ lakhs, ಇದು ಕ್ಯಾಬಿನೇಟ್ ಮುಂದೆ ಬರಬಹುದು ಮುಂದೆ ಏನೋ ಆಗಬಹುದು ಈಗಂತೂ ಸಧ್ಯಕ್ಕೆ ನೀರು ಇಲ್ಲದೆ ದನಗಳು ಜನಗಳು ಸಾಯುತ್ತಿದ್ದಾರೆ. ಜನಗಳು ನೀರು ಇಲ್ಲದೆ ಊರು ಬಿಟ್ಟು ಹೋಗುತ್ತಿದ್ದಾರೆ. ಜನವರಿಯಿಂದ ಜೂನ್‌ವರೆಗೆ ಮಳೆ ಬರುವುದಿಲ್ಲ, ಜೂನ್ ಮತ್ತು ಜುಲೈ ತಿಂಗಳಲ್ಲಿ ಮಳೆಗಾಲವಾದರೂ ಮಳೆ ನಿಲ್ಲದ ಕಾರಣ ಇವತ್ತು ಅಲ್ಲಿ ನೀರಿನ ವ್ಯವಸ್ಥೆ ಬಹಳ ಕೆಟ್ಟದ್ದು ಇದೆ. ನಾಲ್ಕು ತಿಂಗಳುಗಳಿಂದ ಹಣವನ್ನು ಕೇಳುತ್ತಿದ್ದೇವೆ, ಡಿವಿಜನಲ್ ಕಮಿಷನರ್ ಡೆಪ್ಯೂಟಿ ಕಮಿಷನರ್‌ರವರಿಗೆ ಪ್ರತಿಯೊಂದು ಜಿಲ್ಲಾ ಅಭಿವೃದ್ಧಿ ಸಮಿತಿಯಲ್ಲಿ ರೆಸ್ಯೂಲೂಷನ್ ಮಾಡಿ ಕಳುಹಿಸಿದ್ದೇವೆ We are unable to function because the government has not sanctioned the amount ಅದಕ್ಕೆ ನಾವು ಮೊದಲಿನಿಂದಲೂ ಹೇಳುತ್ತಿದ್ದೇವೆ, ಪಂಚಾಯಿತಿ,

† Indicates that remarks or speeches have not been revised by the member concerned.

ತಾಲ್ಲೂಕು ಅಭಿವೃದ್ಧಿ ಮಂಡಳಿ ಮತ್ತು ಮುನಿಸಿಪಾಲಿಟಿಗಳನ್ನು ಶಕ್ತಿಯುತ ಮಾಡಿರಿ ಎಂದು. ನಮ್ಮ ಸರ್ಕಾರ ಆ ಒಂದು ಸಂಪೂರ್ಣ ಶಕ್ತಿಯನ್ನು ತಮ್ಮ ಕಂಟ್ರೋಲ್‌ನಲ್ಲಿ ಇಟ್ಟುಕೊಂಡು ಒಂದು ಪೈಸೆ ಬೇಕಾದರೂ ಸರ್ಕಾರಕ್ಕೆ ಪತ್ರಬರೆಯಬೇಕು. ಪತ್ರ ಬರೆದರೂ ಬೇಗ ಉತ್ತರ ಸಿಗುವುದಿಲ್ಲ. ಆದ ಕ್ಕಾಗಿ ನಾನು ಒಂದು ಸಾರಿ ಸಲಹೆ ಕೊಟ್ಟಿದ್ದೇನೆ, ನೀವು ನಿಮ್ಮ ಪವರ್‌ನ್ನು ಡಿಸೆಂಟ್ರಲೈಸ್ ಮಾಡಿ ಎಂದು. ಡಿ ಸೆಂಟ್ರಲೈಸ್ ಮಾಡಿ ಪವರ್ ಅನ್ನು ವಿಭಾಗಾಧಿಕಾರಿಗಳವರಿಗೆ, ಜಿಲ್ಲಾಧಿಕಾರಿಗಳವರಿಗೆ ಜಿಲ್ಲಾ ಪರಿಷತ್‌ನವರಿಗೆ ತಾಲ್ಲೂಕು ಬೋರ್ಡ್‌ಗಳಿಗೆ ಮತ್ತು ಪಂಚಾಯಿತಿಗಳಿಗೆ ಈ ಪ್ರಕಾರ ಹಂಚಿದರೆ ಈ ಪ್ರಶ್ನೆ ಬರುವುದಿಲ್ಲ. ಬರಗಾಲ ಪರಿಸ್ಥಿತಿ ಇರುವಾಗ ಜನಗಳಿಗೆ ಮತ್ತು ದನಗಳಿಗೆ ಇವತ್ತು ನೀರು ಒದಗಿಸಲಿಕ್ಕೆ ಸಾಧ್ಯವಾಗಿಲ್ಲ. ಆದ್ದರಿಂದ ನಾನು ಮಾನ್ಯ ಮಂತ್ರಿಗಳವರಲ್ಲಿ ಕೇಳುತ್ತಿದ್ದೇನೆ ಈಗಲೇ ಸಧ್ಯಕ್ಕೆ ೨೪ ತಾಸುಗಳೊಳಗೆ ಬಾವಿ ಹೊಡೆಯಲಿಕ್ಕೆ ಆರ್ಡರ್ ಮಾಡಬೇಕು. ತಾವು ಹೇಳಿರುವ ಪ್ರಕಾರ ೨ ಬಾವಿಗಳನ್ನು ತೆಗೆದುಕೊಳ್ಳಲಾಗಿದೆ ಎಂದು, ಆದು ಡಿಸಿಲ್ಟಿಂಗ್ ಮಾಡುವ ಸಲುವಾಗಿ, ಡಿಸಿಲ್ಟಿಂಗ್ ಮಾಡಿದರೆ ೨ ರಿಂದ ೧೦ ಗ್ಯಾಲನ್ ನೀರು ಬರುವುದಿಲ್ಲ, Please not and verify it afterwards. ಆದಕ್ಕಾಗಿ ಅಲ್ಲಿ ಎರಡು ಒಪನ್ ಬಾವಿಗಳನ್ನು ತೆಗೆದುಕೊಳ್ಳಬೇಕು. ಒಪನ್ ವೆಲ್ ಹೊಡೆದರೆ ಬಾವಿಗಳನ್ನು ಡಿಗ್ ಮಾಡುವುದಕ್ಕಿಂತ ಹೆಚ್ಚು ಖರ್ಚು ಬರುತ್ತದೆ. ಈಗಾಗಲೇ ಇದರ ಬಗ್ಗೆ ೧೪ ಸಾವಿರ ರೂಪಾಯಿಗಳು ಖರ್ಚಾಗಿದೆ. ಈಗ ಒಂದು ತಿಂಗಳಿಂದ ಹಣವಿಲ್ಲದೆ ಕೆಲಸ ನಿಲ್ಲಿಸಲಾಗಿದೆ. ನೀವು ೧೦ ಸಾವಿರ ೨೦ ಸಾವಿರ ಕೊಡಲಿಕ್ಕೆ ಇಷ್ಟೊಂದು ಸಮಯ ತೆಗೆದುಕೊಂಡರೆ, ೨ ಲಕ್ಷ ೬೦ ಸಾವಿರ ರೂಪಾಯಿಗಳನ್ನು ಕೊಟ್ಟು ಯಾವಾಗ ಲೆಕ್ಕ ತೆಗೆದುಕೊಳ್ಳುತ್ತಿರಿ? ನೀವು ಹಣ ಕೊಡುವ ಗ್ಯಾರಂಟಿ ಕಾಣುವುದಿಲ್ಲ. ನೀವು ಈ ತರಹ ಹಣ ಕೊಡುವುದನ್ನು ನೋಡಿದರೆ ೧೦ ವರ್ಷಗಳಾದರೂ ಹಣ ಖರ್ಚು ಮಾಡಿ ಕೆಲಸಗಳು ಪೂರ್ಣವಾಗುವುದು ಕಾಣುವುದಿಲ್ಲ. ಈಗ ನೀರು ಇಲ್ಲದೆ ಇರುವುದರಿಂದ ನೀರಿನ ವ್ಯವಸ್ಥೆಯನ್ನು ಮಾಡುತ್ತಿದ್ದೇವೆ, ಲಾರಿಗಳ ಮೂಲಕ ಟ್ರಾಕ್ಟರ್ ಮೂಲಕ ನೀರನ್ನು ಒದಗಿಸುತ್ತಿದ್ದೇವೆಂದು ಏನು ಹೇಳಿದ್ದೀರಿ ಅದು ಆಗುತ್ತಿಲ್ಲ. ಅಲ್ಲಿ ಯಾವ ಲಾರಿಯೂ ಇಲ್ಲ, ನೀರೂ ಇಲ್ಲ. ಅಲ್ಲಿ ನೀರು ಸಿಕ್ಕದೆ ಇರುವುದರಿಂದ ಅಲ್ಲಿ ಯಾವ ಬಾವಿಯ ಕೆಲಸವು ಪೂರ್ಣವಾಗದೆ ಇರುವುದರಿಂದ ನಾನು ಸರ್ಕಾರಕ್ಕೆ ಸಲಹೆ ಮಾಡುತ್ತಿದ್ದೇನೆ. I request the Government to send the entire amount of Rs. 2 lakhs to-day and see that the work is completed within 15 days. ಆ ಪ್ರಕಾರ ಆದರೆ ಮಾತ್ರ ನೀರು ಸಿಗಬಹುದು. ಇಲ್ಲದಿದ್ದರೆ ಕುಡಿಯುವುದಕ್ಕೆ ನೀರು ಸಿಗುವುದಿಲ್ಲ. ಮಾಂಗ ರೀವರ್‌ನಿಂದ ಕುಡಿಯುವ ನೀರನ್ನು ಒದಗಿಸುತ್ತೇವೆಂದು ತಾವು ಹೇಳಿದ್ದೀರಿ, ನಿಮ್ಮ ಸೆಕ್ರೆಟರಿಯೇಟ್‌ನಲ್ಲಿ ತಪ್ಪು ಹೇಳಿರಬಹುದು. ಮಾಂಗ ರೀವರ್ ನಿಂದ ಸ್ಕೀಮ್ ತೆಗೆದುಕೊಂಡು ಬಂದರೆ ೨ ಕೋಟಿ ರೂಪಾಯಿಗಳು ಬೇಕಾಗುತ್ತದೆ. ಆದು ಮಾಂಗ ರೀವರ್ ಅಲ್ಲ ಕಾರಂಜಿ ರೀವರ್ ಇರಬೇಕು ಆದನ್ನು ಸ್ವಲ್ಪ ಸರಿಮಾಡಿಕೊಳ್ಳಿ. ಮಾಂಗ ರೀವರ್ ನೀರನ್ನು ತರಬೇಕಾದರೆ ಆದು ೮ ಮೈಲಿ ದೂರವಾಗುತ್ತದೆ. ಕಾರಂಜಿ ರೀವರ್‌ನಿಂದ ಸ್ಕೀಮ್ ತೆಗೆದು ಕೊಂಡು ಬಂದರೆ ೧ ಕೋಟಿ ರೂಪಾಯಿ ಖರ್ಚಾಗುತ್ತದೆ. ಆದಕ್ಕಾಗಿ ನಾನು ಹೇಳುತ್ತಿದ್ದೇನೆ ಪ್ರಸಾರ ಮಾಡುವುದನ್ನು ಸರಿಯಾಗಿ ಪ್ರಸಾರ ಮಾಡಲಿಲ್ಲ. ಇಷ್ಟು ದುರ್ಲಕ್ಷ, ನೆಗ್ಲಿಜೆನ್ಸ್, ನಿಮ್ಮ ಸೆಕ್ರೆಟರಿಯೇಟ್ ಅಧಿಕಾರಿಗಳಲ್ಲಿ ಇರುವುದಾದರೆ ಇವರು ಯಾವ ಪ್ರಕಾರ ಜನರಿಗೆ ನೀರು ಕೊಡುತ್ತಾರೆಂದು ಕೇಳುತ್ತೇನೆ? ಕುಡಿಯುವುದಕ್ಕೆ ನೀರಿಲ್ಲದೆ ಜನಗಳು ಬಹಳ ಕಷ್ಟಪಡುತ್ತಿದ್ದಾರೆಂದು ನಾವು ಕೇಳುತ್ತಿರುವಾಗ, ಅದೇ ರೀತಿ ಬೆಂಗಳೂರು ನಗರಕ್ಕೆ ೫೫ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ನೀರನ್ನು ಕೊಡುತ್ತಿರುವಾಗ ಒಂದು ಟೌನ್ ಮುನಿಸಿಪಾಲಿಟಿಗೆ ೨ ಲಕ್ಷ ರೂಪಾಯಿಗಳನ್ನು ಕೊಡಿ ಎಂದು ಪತ್ರ ಬರೆದರೆ ೬ ತಿಂಗಳುಗಳಾದರೂ ಏನು ಆಗುವುದಿಲ್ಲ ಇದು ವಿಷಾದಕರ. I am very sorry that the Government has neglected that area which is 500 miles away from Bangalore. ಆದಕ್ಕಾಗಿ ನಮ್ಮ ಭಾಗದ ಜನ ಹೇಳುತ್ತಿದ್ದಾರೆ, ನಾವು ಕರ್ನಾಟಕಕ್ಕೆ ಸೇರಿ ಬಹಳ ತಪ್ಪು ಮಾಡಿದ್ದೇವೆ, ಎರಡು ಕರ್ನಾಟಕ ಆದರೆ ಒಳ್ಳೆಯದು ಎಂದು ಏಕೆಂದರೆ ಅಲ್ಲಿಯ ಜನಗಳನ್ನು ಸರಿಯಾದ ರೀತಿಯಲ್ಲಿ ನೋಡುತ್ತಿಲ್ಲಾ, ಆದಕ್ಕಾಗಿ ಈ ಒಂದು ಪರಿಸ್ಥಿತಿಗೆ ಬಂದಿದ್ದಾರೆ. ನಾನು ಬಹಳ ಮನನೊಂದು ಹೇಳುತ್ತಿದ್ದೇನೆ, ಹೈದರಾಬಾದ್ ಕರ್ನಾಟಕ ಬೋರ್ಡ್ ಎಂದು ಆದಕ್ಕಾಗಿ ಮಾಡಿದ್ದಾರೆ. ಅಲ್ಲಿಯವರು ರಸ್ತೆಗಳನ್ನು ಕೇಳುತ್ತಿಲ್ಲ ದೀಪ ಕೇಳುತ್ತಿಲ್ಲ ಇವತ್ತು ಬರಿ ಕುಡಿಯುವ ನೀರಿನ ಪ್ರಶ್ನೆ, ಆ ಬಗ್ಗೆ ಏತಕ್ಕೆ ಇಷ್ಟು ದುರ್ಲಕ್ಷವನ್ನು ಸರ್ಕಾರ ತಾಳಿದೆ? ಏತಕ್ಕೆ ಈ ತಾರತಮ್ಯವೆಂದು ನಾನು ಕೇಳುತ್ತಿ

ದ್ದೇನೆ. ಬಜೆಟ್‌ನ ಪ್ರಕಾರ ಕೆಲಸ ಕಾರ್ಯಗಳು ನಮ್ಮ ಭಾಗದಲ್ಲಿ ನಡೆಯುತ್ತಿಲ್ಲ, ಇನ್ನು ಮುಂದೆ ಬಜೆಟ್ ಮಾಡುವಾಗ ಸರಿಯಾಗಿ ಮಾಡಿಕೊಳ್ಳಬೇಕು. ಪೊನ್ನೆ ಬೆಂಗಳೂರಿನಲ್ಲಿ ಪ್ರಿಸೈಡಿಂಗ್ ಆಫೀಸರ್ಸ್ ಸಮ್ಮೇಳನ ನಡೆದಾಗ ಕೇರಳದವರು ಬಂದಿದ್ದರು. ಅವರು ಹೇಳುತ್ತಾರೆ ಪ್ರತಿಯೊಂದು ಸಬ್ಜೆಕ್ಟ್‌ಗೂ ಒಂದೊಂದು ಕಮಿಟಿಯನ್ನು ಮಾಡಿದ್ದಾರಂತೆ. ಇಂಡಿಯಾ ಫೈನಾನ್ಸಿಯಲ್ ಕಮಿಷನರ್ ರವರೂ ಯಾವ ರೀತಿ ಹಣವನ್ನು ಹಂಚುತ್ತಾರೆ ಆ ಪ್ರಕಾರ ನಮ್ಮ ರಾಜ್ಯ ಮಟ್ಟದಲ್ಲೂ ಮಾಡಿ ೫ ವರ್ಷಗಳಿಗೆ ಯಾವ ಪ್ರಕಾರ ಪರಿಸ್ಥಿತಿಯನ್ನು ನೋಡಿಕೊಂಡು ತಾಲ್ಲೂಕುಗಳಿಗೆ ಗ್ರಾಮ ಪಂಚಾಯಿತಿಗಳಿಗೆ ಹಣವನ್ನು ಹಂಚಿಕೆ ಮಾಡಿದರೆ ಆ ರೀತಿ ಹಂಚಿಕೆಯಾದರೆ ಮಾತ್ರ ಸರಿಯಾದ imbalance ಸರಿ ತೂಗಬಹುದು. ಕಡೆಯ ಪಕ್ಷ ಕುಡಿಯುವ ನೀರನ್ನಾದರೂ ಒದಗಿಸಬಹುದು. ಅದಕ್ಕಾಗಿ ಮಾನ್ಯ ಮಂತ್ರಿಗಳಿಗೆ ಹೇಳುತ್ತಿದ್ದೇನೆ, ಅವರೇನು ೪೫ ಲಕ್ಷ ರೂಪಾಯಿಗಳ ಸ್ಕೀಮ್‌ನ್ನು ಏನು ಹೇಳಿದ್ದಾರೆ ಅದಕ್ಕೆ ಒಂದು ಟೈಮ್ ಬಾಂಡ್ ಪ್ರೋಗ್ರಾಮ್ ಹಾಕಿಕೊಂಡು ಬೇಗ ಕೆಲಸ ಮುಗಿಸಬೇಕು. ಆ ವಿಷಯ ಕ್ಯಾಬಿನೇಟ್‌ಗೆ ಬರುತ್ತದೆಂದು ಹೇಳಿ ೨ ತಿಂಗಳುಗಳಾಯಿತು. ಆದು ಯಾವಾಗ ಆಗುತ್ತದೋ ಹೇಳುವುದಕ್ಕಾಗುವುದಿಲ್ಲ. ಮಾನ್ಯ ಪಂಂತ್ರಿಗಳಾದ ಧರ್ಮಸಿಂಗ್‌ರವರು ಒಮ್ಮೆ ಹೇಳಿದರು ಜೆವರ್ಗಿ ತಾಲ್ಲೂಕಿನ ವಾಟರ್‌ಸಪ್ಲೈ ಸ್ಕೀಮ್‌ನ್ನು ಮುಖ್ಯಮಂತ್ರಿಗಳವರ ಕೈಯ್ಯಲ್ಲಿ ಪ್ರಾರಂಭೋತ್ಸವ ಮಾಡುವುದಕ್ಕಿಂತ ಮೊದಲು ಭಾಲ್ಕಿ ಸ್ಕೀಮ್‌ನ್ನು ಮಾಡೇ ಮಾಡುತ್ತೇನೆಂದು ಹೇಳಿದರು. ಆದರೆ ಆದು ಆಗಲಿಲ್ಲ, ಆದಕ್ಕೆ ನಾನೇನು ಆಪಾದನೆ ಮಾಡುತ್ತಿಲ್ಲ. ಅವರಿಗೆ ಸ್ವಂತ ಇರುತ್ತದೆ, ಸ್ವಾರ್ಥ ಇರುತ್ತದೆ ಅವರು ಮಾಡಿಕೊಳ್ಳಲಿ ಆ ಮಾತು ಬೇರೆ. ನಿಮ್ಮ ಸ್ವಂತ ಸ್ವಾರ್ಥದಿಂದ ಬೇರೆಯವರಿಗೆ ಲಾಸ್ ಮಾಡಬೇಡಿ, ನೆಗ್ಲೇಟ್ ಮಾಡಬೇಡಿ. ಆ ರೀತಿ ಮಾಡುವುದರಿಂದ ನಿಮ್ಮ ವರ್ಜಿ ಕಡಿಮೆಯಾಗುತ್ತದೆಂದು ಹೇಳುತ್ತಿದ್ದೇನೆ. ಮಂತ್ರಿಯ ಕೆಲಸ ಒಳ್ಳೆಯ ಕೆಲಸವೆಂದು ಆ ಕುರ್ಚಿಗೆ ಬರುತ್ತಾರೆ, ಆದು ಮುಳ್ಳಿನ ಕುರ್ಚಿಯೆಂದು ತಿಳಿದುಕೊಳ್ಳಬೇಕು. ನನಗೆ ಮಂತ್ರಿಗಳ ಬಗ್ಗೆ ಯಾವ ಸಂಶಯವಿಲ್ಲ, ನಾನು ವಿತಕ್ಕೆ ಹೇಳುತ್ತಿದ್ದೇನೆಂದರೆ ಎಲ್ಲಾ ಜನರಿಗೆ ಒಂದೇ ರೀತಿ ವ್ಯವಸ್ಥೆ ಮಾಡಂಪ್ರವರಲ್ಲಿ ಅವರಿಗೆ ವರ್ಜಿ ಕಡಿಮೆಯಾಗಿ, ವೇಟ್ ಕಡಿನಿಯಾಗಿ ಬಹಳ ಕಷ್ಟವಾಗುತ್ತದೆ. ನಮ್ಮ ಧರ್ಮಸಿಂಗ್‌ರವರು ಬಂದಮೇಲೆ ಕೆಲಸ ಮಾಡುತ್ತಿಲ್ಲವೆಂದು ನಾನು ಹೇಳಂತಿಲ್ಲ.

ಉಪಾಧ್ಯಕ್ಷರು.—ಮಾನ್ಯ ಸದಸ್ಯರು ಬೇಗ ಮಾತನಾಡಿ ಮುಗಿಸಿ.

ಶ್ರೀ ಎಸ್. ಭೀಮಣ್ಣ ಖಂಡ್ರೆ.—ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಮಾನ್ಯ ವೀರಪ್ಪ ಮೊಯಿಲಿಯವರು ಮತ್ತು ಧರ್ಮಸಿಂಗ್‌ರವರು ದಯಮಾಡಿ ೪೫ ಲಕ್ಷ ರೂಪಾಯಿಗಳನ್ನು ೧೫ ದಿವಸಗಳೊಳಗೆ ಮಂಜೂರು ಮಾಡಬೇಕು. As a temporary measure, I request the Government to release Rs. 2 lakhs within 24 hours to Bhalki Municipality so that they will be able to supply atleast drinking water to the people, I want a categorical answer from the Hon. Minister for Housing and Urban Development.

ಶ್ರೀ ಧರ್ಮಸಿಂಗ್.—ಮಾನ್ಯ ಉಪಾಧ್ಯಕ್ಷರೇ ಮಾನ್ಯ ಭೀಮಣ್ಣ ಖಂಡ್ರೆಯವರು ನಮ್ಮ ಭಾಗದ ಹಿರಿಯ ಶಾಸಕರಿದ್ದಾರೆ. ಆ ಭಾಗದ ಮತ್ತು ಭಾಲ್ಕಿಯ ಪಟ್ಟಣಕ್ಕೆ ಕುಡಿಯುವ ನೀರಿನ ಅವಶ್ಯಕತೆಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಅವರಿಗೆ ಗೊತ್ತಿದೆ ನಾವು ಈಗಾಗಲೇ ಜಿಲ್ಲಾಧಿಕಾರಿಗಳಿಗೆ ಹೇಳಿದ್ದೇವೆ. ಅವರು ಹೇಳಿದ ರೀತಿಯಲ್ಲಿ ಅಲ್ಲ. ಸ್ಕೇರ್‌ಸಿಟಿ ಫಂಡಿನಿಂದ ೫೦ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಆದು ಇನ್ನು ನವಂಗೆ ತಲುಪಿಲ್ಲ ಎನ್ನತಕ್ಕ ರೀತಿಯಲ್ಲಿ ಮಾತನಾಡಿದ್ದಾರೆ. ಅಲ್ಲಿ ಈಗಾಗಲೇ ೪೭ ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದ್ದೇವೆ. ೫೦ ಲಕ್ಷ ಸಾಕಾಗುವುದಿಲ್ಲವೆಂದು ರೆವಿನ್ಯೂ ಮಂತ್ರಿಗಳಿಗೆ ಮುಖ್ಯಮಂತ್ರಿಗಳಿಗೆ ಮತ್ತು ಆರ್ಥಮಂತ್ರಿಗಳಿಗೆ ತಿಳಿಸಲಾಗಿದೆ. ೪೭ ಲಕ್ಷ ರೂಪಾಯಿಗಳು ಕರ್ನಾಟಕ ಅರ್ಬನ್ ವಾಟರ್ ಸಪ್ಲೈ ಬೋರ್ಡ್‌ನವರು ಖರ್ಚು ಮಾಡಿದರೂ ಕೂಡ, ವಿಭಾಗಾಧಿಕಾರಿಗಳವರಿಗೆ ಹಣ ನೇರವಾಗಿ ತಲಪುತ್ತಿಲ್ಲ. ಅದಕ್ಕೆ ಪುನಃ ೫೦ ಲಕ್ಷ ಡಿಸ್‌ಪೋಸಲ್ ಕೊಟ್ಟಿದ್ದೇವೆ. ಭಾಲ್ಕಿಯಲ್ಲಿರ ತಕ್ಕ ಕುಡಿಯುವ ನೀರಿನ ತೊಂದರೆಯನ್ನು ನಾವು ಒಪ್ಪಿಕೊಂಡಿದ್ದೇವೆ. ನೀರಿನ ತೊಂದರೆಯನ್ನು ಹೋಗಲಾಡಿಸಲು ೬ ಬೋರ್‌ವೆಲ್‌ಗಳನ್ನು ಹಾಕಲಿಕ್ಕೆ ಹೋದಾಗ ವಾಟರ್ ಡೌನ್ ಆಗಿ ೪ ಬೋರ್‌ವೆಲ್‌ಗಳಲ್ಲಿ ೨ ಬೋರ್‌ವೆಲ್‌ಗಳು ಯಶಸ್ವಿಯಾಗಿದೆ.

ಆದರೆ ಅಲ್ಲಿ ಏನು ಬೋರ್‌ವೆಲ್ ಹಾಕಿದ್ದೆವೋ ಅಲ್ಲಿಂದ ನೀರು ಸರಿಯಾಗಿ ಸರಬರಾಜು ಆಗದೆ ಅಲ್ಲಿ ನೀರಿನ ಪೂರೈಕೆ ನಿಂತುಹೋಗಿದೆ ಎಂದು ಹೇಳಿದ್ದಾರೆ. ಮತ್ತು ಬೇರೆ ಕಡೆ ನ್ಯೂ ತಲಾಬ್‌ನಲ್ಲಿ ಹೊಸದಾಗಿ ಏನು ಪ್ರಾರಂಭ ಮಾಡಿದ್ದೇವೆ ಅದಕ್ಕೆ ಬೋರ್‌ವೆಲ್ ಹಾಕಿ ನೀರು ಸಪ್ಲೈ ಮಾಡಬೇಕಾಗಿತ್ತು ಎಂದು ಮಾನ್ಯ ಸದಸ್ಯರು ನಿನ್ನೆಯೂ ಕೂಡ ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಅಲ್ಲದೆ ಇದನ್ನು ಕಾಂಪ್ರಹೆನ್ಸೀವ್ ವಾಟರ್ ಸಪ್ಲೈ ಸ್ಕೀಂಗೆ ತೆಗೆದುಕೊಂಡರೆ ಅಲ್ಲಿಯ ಜನರಿಗೆ ತೊಂದರೆಯಾಗುತ್ತದೆ ಅನ್ನುವ ಮಾತನ್ನೂ ಸಹ ಹೇಳಿದ್ದಾರೆ. ತಮಗೆ ಹೇಳಬೇಕಾದರೆ ಈ ತಿಂಗಳು ೨೩ನೇ ತಾರೀಕಿನಲ್ಲಿ ಎಕ್ಸಿಕ್ಯೂಟೀವ್ ಇಂಜಿನಿಯರನ್ನು ನೀವು ಅಲ್ಲಿಗೆ ಹೋಗಿ ಹ್ಯಾಂಡ್‌ಪಂಪ್‌ನಲ್ಲಾದರೂ ಕೂಡ ಕೆಲಸ ಮಾಡಿಸಿ ಅಂತ ಹೇಳಿದ್ದೇವೆ. ಅವರು ಅಲ್ಲಿ ಬಾವಿ ಹಾಕಿದ್ದಾರೆ. ಈ ಒಂದು ಅರೇಂಜ್‌ಮೆಂಟ್‌ನಿಂದ ದಿನ ಒಂದಕ್ಕೆ ೮ ರಿಂದ ೧೦ ಗ್ಯಾಲನ್ ಆಷ್ಟು ನೀರು ಸಿಕ್ಕಬಹುದು. ನಿನ್ನೆ ದಿವಸವೂ ಕೂಡ ನಾವು ಅವರಿಗೆ ಸ್ಪಿಕ್ ಇನ್‌ಸ್ಟ್ರಕ್ಷನ್ಸ್ ಕೊಟ್ಟಿದ್ದೇವೆ, ಟೆಲಿಫೋನ್‌ನಲ್ಲಿ ಮಾತನಾಡಿ ಡೈರೆಕ್ಷನ್ಸ್ ಕೊಟ್ಟಿದ್ದೇವೆ.

ಶ್ರೀ ಎಸ್. ಭೀಮಣ್ಣ ಖಂಡ್ರೆ...—ಮೊದಲು ಇದಕ್ಕೆ ಒಂದು ಲಕ್ಷ ರೂಪಾಯಿನವರೆಗೆ ಖರ್ಚಾಗಿದೆ, ಆದರೂ ಅಲ್ಲಿ ನೀರು ಸಿಕ್ಕುವುದಿಲ್ಲ.

ಶ್ರೀ ಧರ್ಮಸಿಂಗ್.—ಅವರು ಎಷ್ಟು ಬೇಕೋ ಅಷ್ಟು ಖರ್ಚುಮಾಡಲಿ. ಬೇಕಾದರೆ ಇನ್ನೂ ಕೊಡುತ್ತೇವೆ. ಇದಕ್ಕೆ ಸಂಬಂಧಪಟ್ಟ ರೆವಿನ್ಯೂ ಖಾತೆಯ ಮಂತ್ರಿಗಳೂ ಸಹ ಹೇಳಿದ್ದಾರೆ. ಸ್ಕೇರ್ಸಿಟಿ ರಿಲೀಫ್ ಫಂಡ್‌ನಲ್ಲಿ ಆ ಭಾಗಕ್ಕೆ ಖರ್ಚುಮಾಡುವುದಕ್ಕೆ ೫೦ ಲಕ್ಷ ರೂಪಾಯಿಯನ್ನು ಗುಲ್ಬರ್ಗಾ ಡಿವಿಷನಲ್ ವಿಭಾಗಕ್ಕೆ ಕೊಟ್ಟಿದ್ದಾರೆ. ಆದುದರಿಂದ ಅವರು ನಮ್ಮ ವಾಟರ್‌ಸಪ್ಲೈ ಬೋರ್ಡ್‌ಗೇನೂ ಹೋಗಬೇಕಾದಿಲ್ಲಾ. ಅದು ಬಿಟ್ಟರೂ ಕೂಡ ಡೆಪ್ಯೂಟೀ ಕಮೀಷನರ್‌ರವರು ಹಣ ಇಲ್ಲ ಎಂದು ಏನಾದರೂ ಹೇಳಿದರೆ ಕೊಡುತ್ತೇವೆ ಎಷ್ಟು ಬೇಕಾದರೂ ಖರ್ಚು ಮಾಡಲಿ. ಬೇಕಾದರೆ ಪವರ್ ಪಂಪ್‌ಸೆಟ್‌ಗೆ ೬೦ ಸಾವಿರ ಅಲ್ಲ ೧ ಲಕ್ಷ ಬೇಕಾದರೂ ಕೂಡ ಕೊಡುತ್ತೇವೆ. ಅವರು ಆ ದುಡ್ಡನ್ನು ತೆಗೆದುಕೊಂಡು ಇಂಪ್ರೂ ಮಾಡಿಕೊಳ್ಳಬೇಕು. ನೀವು ನಾಳೆ ದಿವಸ ನಿಮ್ಮ ಕ್ಷೇತ್ರಕ್ಕೆ ಹೋದಾಗ ಈ ಸಭೆಯಲ್ಲಿ ಈ ಬಗ್ಗೆ ನಾವೇನು ಭರವಸೆ ಕೊಟ್ಟಿದ್ದೇವೆ ನೀವು ಕಣ್ಣಾರೆ ಏನು ನೋಡಿದ್ದೀರಿ ಅದನ್ನು ಅವರಿಗೆ ಹೇಳಿ.

ಇನ್ನು ಕಾರಂಜಿ ಪ್ರಾಜೆಕ್ಟ್‌ನಿಂದ ನೀರನ್ನು ತರುತ್ತಾ ಇದ್ದೇವೆ. ಭಾಲ್ಕಿ ವಿಭಾಗದ ಜನರಿಗೆ ನೀರು ಕುಡಿಯಲಿಕ್ಕೆ ತೊಂದರೆ ಇದೆ ಎನ್ನುವುದು ನನಗೂ ಗೊತ್ತಿದೆ, ಮಾನ್ಯ ಮುಖ್ಯಮಂತ್ರಿಗಳಿಗೂ ಗೊತ್ತಿದೆ. ಅದಕ್ಕೆ ೧೪ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತದೆ. ೨-೩ ಸಲ ಈ ವಿಚಾರ ಕ್ಯಾಬಿನೆಟ್‌ನಲ್ಲೂ ಬಂತು. ಇದಕ್ಕೆ ಎಲ್.ಐ.ಸಿ.ಯಿಂದ ಲೋನ್ ತೆಗೆದುಕೊಳ್ಳಬೇಕು, ಅದಕ್ಕೆ ಸರ್ಕಾರ ಒಪ್ಪಬೇಕು. We have to discuss with the L.I.C. people. ಯಾವ ಸ್ಕೀಂ ಆಗಲಿ ೪೦-೫೦ ಲಕ್ಷ ರೂಪಾಯಿ ಖರ್ಚು ಮಾಡತಕ್ಕಂಥಾ ಒಂದು ಯೋಜನೆಯನ್ನು ಸರ್ಕಾರ ತೆಗೆದುಕೊಳ್ಳಬೇಕಾದರೆ ಕಾಂಪ್ರಹೆನ್ಸೀವ್ ಆಗಿ ಅದಕ್ಕೆ ತಕ್ಕಂತೆ ಜನಸಂಖ್ಯೆಗನುಗುಣವಾಗಿ ತೆಗೆದುಕೊಳ್ಳಬೇಕಾಗುತ್ತದೆ. ಇದು ಒಂದು ದೊಡ್ಡ ಸ್ಕೀಂ. ನೀವು ಏನು ಇದರ ಬಗ್ಗೆ ಕನಸು ಕಾಣುತ್ತಿದ್ದರೋ ಅದು ಈಗ ನನಸಾಗಿ ಬರುತ್ತದೆ. ಈಗ ತತ್‌ಕ್ಷಣವಾಗಿ ಪರಿಹಾರ ಮಾಡಬೇಕಾದರೆ ಏನೇ ತೊಂದರೆ ಇದ್ದರೂ ಕೂಡ ಇದನ್ನು we will take temporary measure ಸದ್ಯಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಮಂತ್ರಿಗಳು ಕೊಟ್ಟಂಥಾ ಭರವಸೆಯನ್ನು ಈಡೇರಿಸುತ್ತಾರೆಂದು ಆ ಜನರಿಗೆ ಹೇಳಿ. ಅದಕ್ಕೆ ಅವರು ತೃಪ್ತಿ ಪಡಬಹುದು ಎಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಎಸ್. ಭೀಮಣ್ಣ ಖಂಡ್ರೆ...—ಈ ಒಂದು ಯೋಜನೆಯನ್ನು ಯಾವಾಗ ತೆಗೆದುಕೊಳ್ಳುತ್ತೀರಿ. ಅವರಿಗೆ ಈವೊತ್ತಿನ ದಿವಸ ಕುಡಿಯುವ ನೀರಿಗೆ ಬಹಳ ತೊಂದರೆಯಾಗಿದೆ. ಈ ೪೦-೫೦ ಲಕ್ಷ ರೂಪಾಯಿ ಯೋಜನೆಯನ್ನು ಸಧ್ಯದಲ್ಲೇ ತೆಗೆದುಕೊಂಡು ಈ ಭಾಲ್ಕಿ ಊರಿಗೆ ಕುಡಿಯುವ ನೀರಿನ ಸರಬರಾಜು ಮಾಡುತ್ತೀರಾ?

ಎರಡನೆಯದಾಗಿ ೪೫ ದಿವಸದೊಳಗಾಗಿ ಇದಕ್ಕೆ ಮಂಜೂರಾತಿ ಕೊಟ್ಟು ಕೆಲಸವನ್ನು ತೆಗೆದುಕೊಳ್ಳುವಂತೆ ಮಾಡುತ್ತೀರಾ?

ಶ್ರೀ ಧರ್ಮಸಿಂಗ್.—ಈ ವಿಷಯ ಕ್ಯಾಬಿನೆಟ್‌ಗೆ ಬರುತ್ತಾ ಇದೆ. ೪೫ ದಿವಸ ತಾನೇ ಏತಕ್ಕೆ ಬೇಕು. ಬಹುಶಃ ಇನ್ನು ೧೫ ದಿವಸದೊಳಗೋ ಅಥವಾ ಒಂದು ತಿಂಗಳೊಳಗೋ ಇದರ ಬಗ್ಗೆ ತೀರ್ಮಾನವಾಗತ್ತಾ ಇದೆ.